ಒ.ಎಸ್. ನಂಬರ್ಃ 23/2016
ಪಿಡಬ್ಲ್ಯೂಃ 1
ದಿನಾಂಕಃ 28.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಎಂ ಆರ್ ವಕೀಲರಿಂದಃ</u>

1. ನಾವೆಲ್ಲ ವಾದಿಯರು ಸೈಯದ್ ಶಫೀಹುಲ್ಲಾ ಅವರ ಮಕ್ಕಳಾಗಿರುತ್ತೇವೆ. ಈ ದಾವೆಯಲ್ಲಿ ನನಗೆ ಕೊಟ್ಟಂತಹ ಜೆಪಿಎ ನಿಪಿ 1 ರಲ್ಲಿ 2 ನೇ ವಾದಿಯ ಸಹಿ ಇರುವುದಿಲ್ಲ ಅಂದರೆ ದಾಖಲೆ ನೋಡಿ ಸರಿ ಎಂದು ನುಡಿಯುತ್ತಾರೆ. ದಾವಾ ಹೂಡುವ ಸಮಯದಲ್ಲಿ 2 ನೇ ವಾದಿ ನಮ್ಮ ವಕೀಲರ ಬಳಿ ಬಂದಿರಲಿಲ್ಲ . ವಾದ ಪತ್ರಕ್ಕೆ ನದೀನ್ ಪಾಷ ರವರು ಸಹಿ ಮಾಡಿರುತ್ತಾರೆಯೇ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಅವರ ಸಹಿಯನ್ನು ಯಾರು ಮಾಡಿರುತ್ತಾರೆ ಎಂರೆ ಗೊತ್ತಿಲ್ಲ ಎನ್ನುತ್ತಾರೆ. ಉಳಿದ ವಾದಿಯರ ಸಹಿಗಳನ್ನು ವಾದ ಪತ್ರವನ್ನು ವಕೀಲರ ಬಳಿ ತಯಾರಿಸಿದ ನಂತರ ಅವರ ಮನೆ ಬಳಿ ಹೋಗಿ ಸಹಿ ಪಡೆದಿರುತ್ತೆನೆಯೇ ಅಂದರೆ ಹೌದು ಎನ್ನುತ್ತಾರೆ. 2 ನೇ ವಾದಿ ವಾದ ಪತ್ರಕ್ಕೆ ಸಹಿ ಹೂಡಿಲ್ಲ , ಅವರ ಸಹಿಯನ್ನು ವಾದ ಪತ್ರದಲ್ಲಿ ಸೃಷ್ಟಿಮಾಡಿರುತ್ತೇನೆ. ನನ್ನ ತಂದೆಯ ಅಣ್ಣ ಶಮೀಹುಲ್ಲಾ . ನನ್ನ ತಂದೆ ಮತ್ತು ಅವರ ಅಣ್ಣ ಸೇರಿ ಬಂಗಾರಪೇಟೆಯ ಸರ್ವೆ ನಂಬರ್ 129 ರಲ್ಲಿ 1 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನನ್ನು ದಿನಾಂಕ 28.05.1982 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ . ಸದರಿ ಜಮೀನು ಭೂ ಪರಿವರ್ತನೆ ಆದ ಜಮೀನು ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಖರೀದಿ ನಂತರ ನನ್ನ ತಂದೆ ಮತ್ತು ಅವರ ಅಣ್ಣನ ಹೆಸರಿಗೆ ಮುನಿಸಿಪಾಲಿಟಿ ಖಾತೆ ಸಹ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆ ಮತ್ತು ಅವರ ಅಣ್ಣ ಮೇಲೆ ಹೇಳಿದ ಸ್ವತ್ತನ್ನು ದಿನಾಂಕ 19.03.1999 ರಂದು ನೊಂದಾಯಿತ ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ ಸಂಪೂರ್ಣ 1 ಎಕರೆ 13 ಗುಂಟೆಯ ಚೆಕ್ಕು ಬಂದಿ ಪೂರ್ವಕ್ಕೆ ಮುರುಗನ್ ರೈಸ್ ಮಿಲ್ , ಪಶ್ಚಿಮಕ್ಕೆ ಸರ್ವೆ ನಂಬರ್ 128 ಮಹಮ್ಮದ್ ಜಹೀವುಲ್ಲಾ ರವರ ಸ್ವತ್ತು , ಉತ್ತರಕ್ಕೆ ಗಂಗಮ್ಮನ ಪಾಳ್ಯಕ್ಕೆ ಹೋಗುವ ಅಂಬೇಡ್ಕರ್ ರಸ್ತೆ ಮತ್ತು ದಕ್ಷಿಣಕ್ಕೆ ರೈಲ್ವೆ ಸರಹದ್ದು ಇದೆ ಎಂದರೆ ಸರಿ .

ಸದರಿ ವಿಭಾಗ ಪತ್ರದ ಪ್ರಕಾರ ಸಮೀವುಲ್ಲಾ ರವರಿಗೆ 14 ವರೆ ಗುಂಟೆ ಅಡಿಗಳಲ್ಲಿ ಪೂ-ಪಶ್ಚಿಮ 138 ಮುಕ್ಕಾಲ್ ಅಡಿ , ಉ-ದ ಕ್ಕೆ 112 ಅಡಿ ಬಂದಿರುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ತಂದೆಯವರಿಗೆ 37 ವರೆ ಗುಂಟೆ ಅಡಿಗಳ ಲೆಕ್ಕದಲ್ಲಿ ಒಟ್ಟು 40837.5 ಅಡಿ ಬಂದಿರುತ್ತದೆ . ನಮ್ಮ ದೊಡ್ಡಪ್ಪ ಸೆಮಿವುಲ್ಲಾರವರಿಗೆ ಬಂದ ಆಸ್ತಿಯ ಪಶ್ಚಿಮ- ದಕ್ಷಿಣಕ್ಕೆ ನನ್ನ ತಂದೆಯ ಭಾಗಕ್ಕೆ ಬಂದ ಸ್ವತ್ತು ಇರುತ್ತದೆ ಎಂದರೆ ಸರಿ . ನಮ್ಮ ತಂದೆಗೆ ಬಂದ ಪಶ್ಚಿಮ ದಿಕ್ಷಿಗೆ ಓಡಾಡಲು ಪೂ-ಪ 20 ಅಡಿ ಅಗಲ ರಸ್ತೆ ಮತ್ತು ಉ-ದ 170 ಅಡಿ ರಸ್ತೆ ಬಿಡಲಾಗಿದೆ ಎಂದರೆ ಸರಿ . ಸದರಿ ರಸ್ತೆಯನ್ನು ಹೊರತುಪಡಿಸಿ ಉಳಿದಿರತಕ್ಕ ಸ್ವತ್ತನ್ನು ನಿಪಿ 3 ರಿಂದ 5 ರಂತೆ 1 ನೇ ಪ್ರತಿವಾದಿಗೆ ನಾವು ಮಾರಾಟ ಮಾಡಿರುತ್ತೇವೆ ಎಂದರೆ ಸರಿ . 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಗಂಡ ಅಂದರೆ ಸರಿ . ನಾವು ಮಾರಿದ ಸ್ವತ್ತು ಅಡಿಗಳ ಲೆಕ್ಕದಲ್ಲಿ ಅಂದರೆ ಸರಿ . ನಿಪಿ 3 ರಿಂದ 5 ದಾಖಲೆಗಳ ಪ್ರಕಾರ 1 ನೇ ಪ್ರತಿವಾದಿಗೆ ಒಟ್ಟು 38150 ಅಡಿ ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ . 3 ಪತ್ರಗಳನ್ನು ದಿನಾಂಕ 29.07.2009 ರಂದು ಮಾಡಲಾಗಿದೆ ಎಂದರೆ ಸರಿ . ನನ್ನ ತಂದೆಯವರಿಗೆ ಸರ್ವೆ

ನಂಬರ್ 128 ರಲ್ಲಿ ಯಾವುದಾದರೂ ಸ್ವತ್ತು ಇತ್ತಾ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಮೇಲೆ ಹೇಳಿದ ಸ್ವತ್ತನ್ನು ಮಾರಾಟ ಮಾಡಿದ ಮಾರನೇ ದಿನ ಅಂದರೆ ದಿನಾಂಕ 30.07.2009 ರಂದು ಒಟ್ಟು 7592 ಅಡಿ ಸ್ವತ್ತನ್ನು ದಾನ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿ. 1999 ರಲ್ಲಿ ಆದಂತಹ ವಿಭಾಗ ಪತ್ರದ ಅಡಿಯಲ್ಲಿ ಬಂದಂತಹ ಸ್ವತ್ತಿನಲ್ಲಿನ ಸ್ವತ್ತನ್ನು ದಾನ ಪತ್ರದ ಮುಖಾಂತರ ನನಗೆ ನೀಡಿರುತ್ತಾರೆ ಎಂದರೆ ಸರಿ . ನಿಪಿ 3 ರ ಪ್ರಕಾರ 1 ನೇ ಪ್ರತಿವಾದಿಗೆ ನಾವೆಲ್ಲಾ ಸೇರಿ 15400 ಚದರ ಅಡಿ ಮಾರಾಟ ಮಾಡಿರುತ್ತೇವೆ ಅಂದರೆ ಸರಿ .

ನಮ್ಮ ತಂದೆಗೆ ವಿಭಾಗ ಪತ್ರದಲ್ಲಿ ಬಂದ ಆಸ್ತಿಯಲ್ಲಿ ಚೆಕ್ಕು ಬಂದಿ ಇತ್ತೊ ಅದೇ ಪ್ರಕಾರ 1 ನೇ ಪ್ರತಿವಾದಿಗೆ ಮಾರಾಟವಾಗಿದೆ ಅಂದರೆ ಚೆಕ್ಕು ಬಂದಿ ಸರಿ ಇದೆ ಆದರೆ ವಿಸ್ತೀರ್ಣ ಹೆಚ್ಚಾಗಿದೆ ಎನ್ನುತ್ತಾರೆ. ನಿಪಿ 3 ರ ಪ್ರಕಾರ 15400 ಅಡಿ ಜಾಗ ದಕ್ಷಿಣದ ಕಡೆಯ ಸ್ವತ್ತು ಎಂದರೆ ಸರಿ . ನಿಪಿ 3 ರ ಪ್ರಕಾರ ದಕ್ಷಿಣದ ಕಡೆ ರೈಲ್ವೆ ಸರಹದ್ದು ಇದೆ ಎಂದು ಉಲ್ಲೇಖ ಇದೆ ಅಂದರೆ ಸರಿ . ನಿಪಿ 3 ರಿಂದ 5 ರಲ್ಲಿ ಸದರಿ ಸ್ವತ್ತುಗಳನ್ನು ಮಾರಾಟ ಮಾಡಿ ಉಳಿಕೆ ಸ್ವತ್ತನ್ನು ಉಳಿಸಿ ಕೊಂಡ ಬಗ್ಗೆ ಎಲ್ಲೂ ಉಲ್ಲೇಖ ಇಲ್ಲ ಅಂದರೆ ಸರಿಯಲ್ಲ. ವಿಸ್ತೀರ್ಣ ಹೆಚ್ಚಿಗೆ ತೋರಿಸಲಾಗಿದೆ ಎನ್ನುವ ಬಗ್ಗೆ ಸರಿಪಡಿಸಲು ನಾವೇನಾದರೂ ಬೇರೆ ದಾವೆಯನ್ನು ಸಲ್ಲಿಸಿರುತ್ತೆವೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 3 ರಲ್ಲಿ ಖರೀದಿ ಮಾಡಿದ ಸ್ವತ್ತಿನ ಪೈಕಿ ಮುರುಗನ್ ಮಿಲ್ ಗೆ ಹೊಂದಿಕೊಂಡಂತೆ ಉತ್ತರದಿಂದ ದಕ್ಷಿಣದ ರೈಲ್ವೆ ಸರಹದ್ದಿನ ವರೆಗೂ ಮನೆಗಳನ್ನು ಕಟ್ಟಿ 1 ನೇ ಪ್ರತಿವಾದಿ ಅವುಗಳನ್ನು ಮರಾಟ ಮಾಡಿರುತ್ತಾರೆ ಎಂದರೆ ನ್ಯಾಯಾಲಯದಿಂದ ನಿರ್ಬಂದಕಾಜ್ಞೆ ಇದ್ದರೂ ಸಹ 2 ಮನೆಗಳನ್ನು ಕೋರೋನಾ ಸಮಯದಲ್ಲಿ ಕಟ್ಟಿರುತ್ತಾರೆ ಎನ್ನುತ್ತಾರೆ. ಕೊರೋನಕ್ಕೂ ಮುಂಚೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್ ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿ . ಹೆಚ್ಚಿಗೆ 3800 ಅಡಿ ಬಗ್ಗೆ ಆದೇಶವನ್ನು ಸಹ ಮಾಡಿರುತ್ತಾರೆ ಎನ್ನುತ್ತಾರೆ. ದಕ್ಷಿಣ-ಪೂರ್ವ ಭಾಗದಲ್ಲಿ ಒಂದು 3 ಅಂತಸ್ತಿನ ಮನೆ ಮತ್ತು 2 ಅಂತಸ್ತಿನ ಮನೆ ಇದೆ ಎಂದರೆ ಸರಿ . ಸದರಿ 2 ಮನಗೆಳು 2012 ರಲ್ಲಿ ಕಟ್ಟಲಾಗಿದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿಯೇ ಮೇಲೆ ಹೇಳಿದ 2 ಮನೆಗಳು ಅಲ್ಲಿದ್ದವು ಅಂದರೆ ಗೊತ್ತಿಲ್ಲ ಎನ್ನುತ್ತಾರೆ.

ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ರಹೀಮಾಲಿ ಎಮ್ ನದಾಫ್)
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್ (ಸಂಚಾರಿ ಪೀಟಃ ಬಂಗಾರಪೇಟೆ).